ದಿನಾಂಕಃ 26.07.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಪಾಟಿ ಸವಾಲುಃ ವಾದಿ ಪರ ಶ್ರೀ ಎಂ ಆರ್ ಪಿ ವಕೀಲರಿಂದ**.

ನಿಮ್ಮ ತಂದೆ ಯಾವಾಗ ಮರಣ ಹೊಂದಿರುತ್ತಾರೆಂದರೆ ಸಾಕ್ಷಿ ದಿನಾಂಕ ಗೊತ್ತಿಲ್ಲ ಆದರೆ 25 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆನ್ನುತ್ತಾರೆ. ನನ್ನ ತಂದೆಯ ಮರಣದ ಪ್ರಮಾಣಪತ್ರ ತೆಗೆಸಿರುವುದಿಲ್ಲ ಅಂದರೆ ಸರಿ. ನಿಮ್ಮ ಅಜ್ಜ ಕೊಟ್ರಬಸಪ್ಪ ಯಾವಾಗ ಮರಣ ಹೊಂದಿರುತ್ತಾರೆಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಅಜ್ಜನ ಮರಣದ ಪ್ರಮಾಣಪತ್ರ ತೆಗೆಸಿರುವುದಿಲ್ಲ ಅಂದರೆ ಸರಿ. ನಿಮ್ಮ ಕುಟುಂಬದ ವಂಶವೃಕ್ಷ ತೆಗೆಸಿರುತ್ತೀರಾ ಅಂದರೆ ಸಾಕ್ಷಿ ತೆಗೆಸಿರುತ್ತೇನೆ ಅದು ಮನೆಯಲ್ಲಿ ಇರುತ್ತದೆ ಎನ್ನುತ್ತಾರೆ. ವಂಶವೃಕ್ಷ ತೆಗೆಸಬೇಕಾದರೆ ನಿನ್ನ ತಂದೆ ಮತ್ತು ನಿನ್ನ ಅಜ್ಜನ ಮರಣದ ಪ್ರಮಾಣಪತ್ರವನ್ನು ತಹಶೀಲ್ದಾರ ಕಚೇರಿಗೆ ಕೊಟ್ಟು ತೆಗೆಸಬೇಕು ಅಂದರೆ ಸರಿ. ನನ್ನ ತಂದೆ ಪುಟ್ಟಪ್ಪ 2004 ನೇ ಇಸವಿಯಲ್ಲಿ ಮರಣ ಹೊಂದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜ ಜೀವಂತ ಇದ್ದಾಗ ನಮ್ಮ ಅಜ್ಜನೆ ಕುಟುಂಬದ ವ್ಯವಹಾರ ಮಾಡುತ್ತಿದ್ದರು ಅಂದರೆ ಸರಿ. ನನ್ನ ತಂದೆ ಜೀವಂತ ಇದ್ದಾಗ ಕುಟುಂಬದ ವ್ಯವಹಾರ ನನ್ನ ತಂದೆಯೇ ಮಾಡುತ್ತಿದ್ದರು ಅಂದರೆ ಸರಿ. ನಿನ್ನ ಅಜ್ಜ ಮತ್ತು ತಂದೆ ಏನು ವ್ಯವಹಾರ ಮಾಡಿರುತ್ತಾರೆಂದು ನಿಮಗೆ ಗೊತ್ತಿಲ್ಲ ಅಂದರೆ ಸಾಕ್ಷಿ 1955 ನೇ ಇಸವಿಯಲ್ಲಿ ನನ್ನ ಅಜ್ಜನಿಗೆ ನೋಂದಾಯಿತ ಪತ್ರವನ್ನು ಭಟ್ಟರು ಬರೆದುಕೊಟ್ಟಿರುತ್ತಾರೆನ್ನುತ್ತಾರೆ. 1955 ರ ನೋಂದಾಯಿತ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಅಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ದಾವಾ ಆಸ್ತಿಗಳನ್ನು ಗುರುನಾಥಭಟ್ಟರವರು ಕೊಟ್ರಬಸಪ್ಪನವರಿಗೆ ದಿನಾಂಕಃ 06.07.1925 ರಂದು ವರ್ಷಕ್ಕೆ ರೂ.6/- ಗುತ್ತಿಗೆ ಕರಾರು ಆಧಾರದ ಮೇಲೆ ಕೊಟ್ಟಿರುತ್ತಾರೆಂದರೆ ಸಾಕ್ಷಿ ಅವತ್ತಿನಿಂದ ನಾವು ಜಮೀನನ್ನು ಸಾಗುವಳಿ ಮಾಡಿಕೊಂಡು ಬಂದಿರುತ್ತೇವೆ ಎನ್ನುತ್ತಾರೆ. ನನ್ನ ಅಜ್ಜ ಪ್ರತಿ ವರ್ಷ ಗುತ್ತಿಗೆ ಹಣ ರೂ.6/- ನ್ನು ಗುರುನಾಥಭಟ್ಟರವರಿಗೆ ಕೊಡುತ್ತಿದ್ದರು ಅಂದರೆ ನನಗೆ ಗೊತ್ತಿಲ್ಲ. ದಿನಾಂಕಃ 06.07.1925 ರ ಗುತ್ತಿಗೆ ಕರಾರುಪತ್ರ ಸೊರಬದ ಉಪನೋಂದಣಿ ಕಚೇರಿಯಲ್ಲಿ ನೋಂದಣಿ ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ನಾನು 2006 ನೇ ಇಸವಿಯಲ್ಲಿ ರಾಮಮೂರ್ತಿ ವಿರುದ್ಧ ಅ.ದಾ.152/2006 ನ್ನು ದಾಖಲಿಸಿದ್ದೆ ಅಂದರೆ ಸರಿ. ರಾಮಮೂರ್ತಿಯವರು ಆನವಟ್ಟಿಯಲ್ಲಿ ವಾಸವಿದ್ದರಾ ಅಂದರೆ ಸರಿ.

ರಾಮಮೂರ್ತಿಯವರು ಆನವಟ್ಟಿಯಲ್ಲಿ ಇದ್ದಾಗ ನೀವು ಹೋಗುವುದು-ಬರುವುದು ಮಾಡುತ್ತಿದ್ದೀರಿ ಅಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಖಾನೆಶಮರಿ ಸ್ವತ್ತುಗಳು ಅಂದರೆ ಸರಿ. ದಾವಾ ಸ್ವತ್ತುಗಳ ಮೊದಲ ನಂಬರ್ 65 ಮತ್ತು 66 ಇದ್ದು ಈಗ ಗ್ರಾಮ ಪಂಚಾಯಿತಿಯವರು 82 ಮತ್ತು 83 ಅಂತ ನಂಬರ್ ನೀಡಿರುತ್ತಾರೆಂದರೆ ಸರಿ. ದಾವಾ ಸ್ವತ್ತುಗಳಲ್ಲಿ 42 ಸಾಗವಾನಿ ಮರಗಳು, 6 ಹೊನ್ನೆಮರಗಳು ಇರುತ್ತವೆ ಅಂದರೆ ಸರಿ. ದಾವಾ ಸ್ವತ್ತಿನಲ್ಲಿ ಇರುವ ಮರಗಳು ಬಹಳ ಹಳೆಯ ಮರಗಳು ಇರುತ್ತವೆ ಅಂದರೆ ಸರಿ. ದಾವಾ ಸ್ವತ್ತಿನಲ್ಲಿ ಇರುವ ಮರಗಳಿಗೆ ಅರಣ್ಯ ಇಲಾಖೆಯವರು ನಂಬರ್ ಕೊಟ್ಟಿದ್ದಕ್ಕೆ ನಾನು ದಾವೆ ಹಾಕಿದ್ದೆ ಅಂದರೆ ಸರಿ. 1925 ನೇ ಇಸವಿಯಿಂದ 2017 ರವರೆಗೂ ಗುರುನಾಥಭಟ್ಟರವರ ಹೆಸರಲ್ಲಿ ದಾವಾ ಸ್ವತ್ತಿನ ದಾಖಲೆಗಳು ಇದ್ದವು ಅಂದರೆ ಗೊತ್ತಿಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ಈಗ ನಮ್ಮ ಹೆಸರಲ್ಲಿ ದಾವಾ ಸ್ವತ್ತುಗಳು ಇರುತ್ತವೆ. ದಾವಾ ಸ್ವತ್ತಿನ ಖಾತೆಗಳು ನಿಮ್ಮ ಹೆಸರಿಗೆ ಬದಲಾಗಿ ಎಷ್ಟು ವರ್ಷಗಳು ಆಗಿರುತ್ತದೆ ಅಂದರೆ ಸಾಕ್ಷಿ 7-8 ವರ್ಷಗಳು ಆಗಿರುತ್ತದೆ ಎಂದು ಹೇಳುತ್ತಾರೆ. ದಾವಾ ಸ್ವತ್ತುಗಳ ಖಾತೆ ನನ್ನ ಹೆಸರಿಗೆ ಆಗುವ ಪೂರ್ವದಲ್ಲಿ ಗುರುನಾಥಭಟ್ಟರವರ ಹೆಸರಿನಲ್ಲಿ ಇದ್ದವು ಅಂದರೆ ನನಗೆ ಗೊತ್ತಿಲ್ಲ. ಕೊಟ್ರಬಸಪ್ಪ ಪ್ರತಿ ವರ್ಷ ಯುಗಾದಿಗೆ ಗುರುನಾಥಭಟ್ಟರವರಿಗೆ ರೂ.6/- ಗೇಣಿ ಕೊಡುತ್ತಾ ಬರುತ್ತಿದ್ದರು ಅಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜ ಮರಣ ಹೊಂದಿದ ನಂತರ ನನ್ನ ತಂದೆ ಪ್ರತಿ ವರ್ಷ ವಾದಿ ಕುಟುಂಬಕ್ಕೆ ರೂ.6/- ಗೇಣಿ ಕೊಡುತ್ತಾ ಬರುತ್ತಿದ್ದರು ಅಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಮರಣ ಹೊಂದಿದ ನಂತರ ರಾಮಮೂರ್ತಿಯವರು ಪ್ರತಿ ವರ್ಷ ಗೇಣಿ ಕೊಡಬೇಕು ಅಂತ ನಮಗೆ ಕೇಳಿರುತ್ತಾರೆಂದರೆ ಸರಿಯಲ್ಲ. ಮೃತ ವಾದಿ ನಮಗೆ ಗೇಣಿ ಹಣ ಕೇಳಿದ್ದಕ್ಕೆ ನಾವು 2006 ರಲ್ಲಿ ಆತನ ವಿರುದ್ಧ ದಾವೆ ಮಾಡಿರುತ್ತೇವೆಂದರೆ ಸರಿಯಲ್ಲ. ಮೃತ ವಾದಿಯ ವಿರುದ್ಧ ದಾವಾ ಸ್ವತ್ತಿನ ನನ್ನ ಸ್ವಾಧೀನಕ್ಕೆ ತೊಂದರೆ ಕೊಡಬಾರದೆಂದು 2006 ರಲ್ಲಿ ದಾವೆ ಹಾಕಿದ್ದೆ ಅಂದರೆ ಸರಿ. ಅ.ದಾ.152/2006 ದಿನಾಂಕಃ 09.09.2015 ರಂದು ತೀರ್ಮಾನ ಆಗಿರುತ್ತದೆ ಅಂದರೆ ಸರಿ. ಎಷ್ಟು ಹಣ ಕೊಟ್ಟು ದಾವಾ ಸ್ವತ್ತಿನ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೀಯಾ ಅಂದರೆ ಸಾಕ್ಷಿ ರೂ.16,000/- ಕಂದಾಯ ಕಟ್ಟಿ ದಾವಾ ಸ್ವತ್ತಿನ ಖಾತೆ ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎನ್ನುತ್ತಾರೆ. ಅ.ದಾ.152/2006 ರ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ಸರಿ. 1925 ರಿಂದ ದಾವಾ ಸ್ವತ್ತಿನ

ಕಂದಾಯವನ್ನು ವಾದಿಗಳೆ ಪಾವತಿ ಮಾಡುತ್ತಾ ಬಂದಿರುತ್ತಾರೆಂದರೆ ಸರಿಯಲ್ಲ. ಈ ದಾವೆಯಲ್ಲಿ ಹಾಜರುಪಡಿಸುವ ಸಂಬಂಧ 2017 ರಲ್ಲಿ ಕಂದಾಯ ಕಟ್ಟಿ ರಸೀದಿ ಪಡೆದಿರುತ್ತೇನೆ ಅಂದರೆ ಸರಿಯಲ್ಲ. ಗೇಣಿ ಹಣವನ್ನು ಪಾವತಿಸದೆ ಇರುವ ಕಾರಣ ವಾದಿಯರು ನನಗೆ ಮತ್ತು ಇತರೆ ಪ್ರತಿವಾದಿಗಳಿಗೆ ವಕೀಲರ ಮೂಲಕ ದಿನಾಂಕಃ 08.05.2017 ರಂದು ನೋಟೀಸ್ ಕೊಡಿಸಿರುತ್ತಾರೆಂದರೆ ಸಾಕ್ಷಿ ನಮಗೆ ತಲುಪಿಲ್ಲ ಎನ್ನುತ್ತಾರೆ. ದಿನಾಂಕಃ 30.11.2017 ಕ್ಕೆ ನಮ್ಮ ಗೇಣಿ ಹಕ್ಕನ್ನು ರದ್ದುಪಡಿಸಿರುತ್ತಾರೆಂದರೆ ಸರಿಯಲ್ಲ. ವಾದಿಯರು ಕೊಟ್ಟ ನೋಟೀಸ್ ಗೆ ವಕೀಲರ ಮೂಲಕ ಪ್ರತ್ಯುತ್ತರ ನೋಟೀಸ್ ಕೊಟ್ಟಿರುತ್ತೇವೆಂದರೆ ಸರಿಯಲ್ಲ. ದಿನಾಂಕಃ 01.12.2017 ರಿಂದ ನಾವು ಗೇಣಿದಾರರಾಗಿ ದಾವಾ ಸ್ವತ್ತಿನಲ್ಲಿ ಮುಂದುವರೆಯುವ ಹಕ್ಕು ಇಲ್ಲ ಅಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ವಾದಿಗಳೆ ಮಾಲೀಕರು ಇರುತ್ತಾರೆಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲ ಅಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನಮ್ಮ ಗೇಣಿ ಹಕ್ಕು ರದ್ದಾಗಿರುವ ಕಾರಣ ನಾವು ದಾವಾ ಸ್ವತ್ತಿನ ಸ್ವಾಧೀನವನ್ನು ವಾದಿಯರಿಗೆ ಕೊಡಲು ಬಾಧ್ಯಸ್ಥರಾಗಿರುತ್ತೇವೆಂದರೆ ಸರಿಯಲ್ಲ. 2017 ನೇ ಇಸವಿಯಲ್ಲಿ ಕಾನೂನುಬಾಹಿರವಾಗಿ ಪಂಚಾಯಿತಿಯಲ್ಲಿ ದಾವಾ ಆಸ್ತಿಗಳ ಖಾತೆಯನ್ನು ನಮ್ಮ ಹೆಸರಿಗೆ ಬದಲಾಯಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ನಾವು ಹಾಜರಾಗುವ ಪೂರ್ವದಲ್ಲಿ ಯಾವತ್ತು ದಾವಾ ಸ್ವತ್ತಿನ ಕಂದಾಯವನ್ನು ಪಾವತಿ ಮಾಡಿಲ್ಲ ಅಂದರೆ ಸರಿಯಲ್ಲ. ನಿಮ್ಮ ಅಜ್ಜ ಬರೆದುಕೊಟ್ಟ ಗೇಣಿ ಕರಾರುಪತ್ರವನ್ನು ನೋಡಿರುತ್ತೀರಾ ಅಂದರೆ ಸಾಕ್ಷಿ ನೋಡಿರುತ್ತೇನೆ ಎನ್ನುತ್ತಾರೆ. ದಾವಾ ಸ್ವತ್ತಿನ ಗೇಣಿ ಹಕ್ಕು ಬೇಕು ಎಂದು ಭೂನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ನೀವು ಸಲ್ಲಿಸಿರುತ್ತೀರಿ ಎಂದು ಹೇಳುವ ಅರ್ಜಿಯ ಮೇಲೆ ಭೂನ್ಯಾಯ ಮಂಡಳಿಯಲ್ಲಿ ಏನಾದರೂ ಆದೇಶ ಆಗಿರುತ್ತದೆಯಾ ಅಂದರೆ ಸಾಕ್ಷಿ ಆದೇಶ ಆಗಿರುವುದಿಲ್ಲ ಎನ್ನುತ್ತಾರೆ. ಭೂನ್ಯಾಯ ಮಂಡಳಿಗೆ ದಾವಾ ಸ್ವತ್ತಿನ ಗೇಣಿ ಹಕ್ಕು ಕೋರಿ ಅರ್ಜಿ ಸಲ್ಲಿಸಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ಸರಿ. ದಾವಾ ಆಸ್ತಿಗಳು ಖಾನೆಶಮರಿ ಆಸ್ತಿಗಳು ಆಗಿರುವ ಕಾರಣ ಭೂನ್ಯಾಯ ಮಂಡಳಿಗೆ ಗೇಣಿ ಹಕ್ಕು ಕೋರಿ ಅರ್ಜಿ ಸಲ್ಲಿಸಲು ಬರುವುದಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಸಾಗವಾನಿ ಮತ್ತು ಹೊನ್ನೆಮರ ಇರುವ ಕಾರಣ ಅವುಗಳನ್ನು ಅಕ್ರಮವಾಗಿ ಪಡೆಯುವ ಉದ್ದೇಶದಿಂದ ದಾವಾ ಸ್ವತ್ತಿನ ಮೇಲಿನ ವಾದಿಯರ

ಮಾಲೀಕತ್ವವನ್ನು ಅಲ್ಲಗಳೆಯುತ್ತಿದ್ದೇವೆ ಅಂದರೆ ಸರಿಯಲ್ಲ. ನಾವು ವಾದಿಯರಿಗೆ ಪ್ರತಿ ವರ್ಷ ರೂ.500/- ನಷ್ಟ ಪರಿಹಾರ ಕೊಡಲು ಬಾಧ್ಯಸ್ಥ ಇರುತ್ತೇವೆಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನಮಗೆ ಮಾಲೀಕತ್ವದ ಹಕ್ಕು ಇರುವುದಿಲ್ಲ ಅಂದರೆ ಸರಿಯಲ್ಲ. ನಿಪಿ 26 ರಲ್ಲಿ ಕಾಣುವ ಮರಗಳು ದಾವಾ ಸ್ವತ್ತಿನ ಮರಗಳು ಇರುತ್ತವೆ ಅಂದರೆ ಸರಿ. ವಾದಿಯರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.